CC No.1784-2021
CW-4, PW-1

. **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ**

**ಸಿಸಿ ನಂ. 1784/2021**

ಚಾಸಾ-4 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ:05.06.2025.

ಹೆಸರು ಃ ಸುರೇಶ

ತಂದೆಯ ಹೆಸರು ಃ ಶಿವಯೋಗಪ್ಪ

ವಯಸ್ಸು ಃ 40 ವರ್ಷ

ಉದ್ಯೋಗ ಃ ಎ.ಎಸ್.ಐ. ಯಡ್ರಾಮಿ ಪೊಲೀಸ ಠಾಣೆ

ವಾಸಸ್ಥಳ ಃ ಯಡ್ರಾಮಿ

ಃ ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

2017 ರಿಂದ 2021 ರ ವರೆಗೆ ಅಫಜಲಪೂರ ಪೊಲೀಸ ಠಾಣೆಯಲ್ಲಿ ಪೊಲೀಸ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 19.05.2020 ರಂದು ಸುಮಾರು 8.30 ಗಂಟೆಗೆ ನಾನು, ಚಾಸಾ 5, 6 ರವರು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರು ಜೇವರ್ಗಿ ಬಿ ಗ್ರಾಮದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ ದಾಳಿ ಮಾಡುವುದಿದ್ದು ಅದಕ್ಕಾಗಿ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆ. ಅದರಂತೆ ನಾನು ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಬಂದು ಚಾಸಾ 1 ರವರಿಗೆ ಪರಿಚಯ ಮಾಡಿಸಿರುತ್ತೇನೆ. ನಂತರ 8.45 ಗಂಟೆಗೆ ನಾನು , ಪಂಚರು, ಚಾಸಾ 1 ಮತ್ತು 6 ರವರು ಸೇರಿ ಮಾಹಿತಿ ಬಂದ ಸ್ಥಳಕ್ಕೆ ನಮ್ಮ ಸರ್ಕಾರಿ ಜೀಪಿನಲ್ಲಿ ಹೊರಟ್ಟಿದ್ದು ಸುಮಾರು 9.15 ಗಂಟೆಗೆ ಜೇವರ್ಗಿ ಗ್ರಾಮವನ್ನು ತಲುಪಿರುತ್ತೇವೆ. ನಂತರ ನಾವು ಬಸ್ ನಿಲ್ದಾಣದ ಹತ್ತಿರ ನಿಂತು ವಿಕ್ಷಣೆ ಮಾಡಿ ನೋಡಿದಾಗ ಅಲ್ಲಿ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ . ಸುಮಾರು 9.30 ಗಂಟೆಗೆ ಆತನ ಮೇಲೆ ನಾವು ದಾಳಿ ಮಾಡಿ ಹಿಡಿದು ಆತನನ್ನು ಪರೀಶಿಲನೆ ಮಾಡಿದಾಗ ಆತನ ಬಳಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಮಾಕ್ ಡೇವೆಲ್ಸ ವಿಸ್ಕಿಯ 48

ಬಾಟಲ್‌ಗಳು, ಇಂಪಿರಿಯಲ್ ಬ್ಲ್ಯೂ ವಿಸ್ಕಿಯ  48 ಬಾಟಲಗಳು, ಬ್ಯಾಗ ಪೇಪರ ವಿಸ್ಕಿಯ 48 ಟೇಟ್ರಾ ಪ್ಯಾಕೇಟಗಳು , ಒಲ್ಡ ಟವರಿನ್ ವಿಸ್ಕಿಯ 23 ಟೇಟ್ರಾ ಪ್ಯಾಕೇಟಗಳು , ಮತ್ತು ಆಫೀಸರ್ಸ ಚಾಯಿಸ್ ವಿಸ್ಕಿಯ 180 ML ನ 36 ಟೇಟ್ರಾ ಪ್ಯಾಕೇಟಗಳು , Original choice ವಿಸ್ಕಿಯ 35 ಟೇಟ್ರಾ ಪ್ಯಾಕೇಟಗಳು ,  MC ವಿಸ್ಕಿಯ ಯ 10 ಬಾಟಲಗಳು ,  750 ML ನ  ಒಂದು MC rum ಬಾಟಲ,  ಮತ್ತೊಂದು 750 ML ನ old tavern ವಿಸ್ಕಿಯ  ಯ ಬಾಟಲಗಳು ಆತನ ಬಳಿ ಒಟ್ಟು  11 ಕಂಪನಿಯ ವಿಸ್ಕಿಯ ಬಾಟಲಗಳು ಮತ್ತು ಟೇಟ್ರಾ ಪ್ಯಾಕೇಟಗಳು ದೊರೆತ್ತಿರುತ್ತವೆ.

ಚಾಸಾ 1 ರವರು ಪಂಚರ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ ಸ್ಯಾಪಲ್ ಅಂತಾ ಪ್ರತಿಯೊಂದು ಕಂಪನಿಯ ವಿಸ್ಕಿಯ ಬಾಟಲಗಳಲ್ಲಿ ತಲಾ ಒಂದೊಂದರಂತೆ ಬಾಟಲಗಳನ್ನು ತೆಗೆದಿರುತ್ತಾರೆ.  ಸದರಿ ಜಪ್ತಿ ಪಡಿಸಿಕೊಂಡ ಮದ್ಯದ ಮೌಲ್ಯ 33,690/-  ಇರುತ್ತದೆ.  ಮತ್ತು ಆತನ ಬಳಿ ಸುಮಾರು 300/- ರೂ.ಗಳು ಇತ್ತು.  ಸುಮಾರು 11.00 ಗಂಟೆಗೆ  ಕಚೇರಿಗೆ ಮರಳಿ ಆರೋಪಿತನ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆ. ಆರೋಪಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ.

ತೆರೆದ ನ್ಯಾಯಾಲಯದಲ್ಲಿ ಒಟ್ಟು 11 ಸೀಲ್ ಮಾಡಿದ  ಬಿಳಿ ಬಟ್ಟೆಯ ಚೀಲಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಅವುಗಳಲ್ಲಿ ಮೊದಲನೆಯದಾಗಿ  48 MC  Whiskey  180 ML ನ Bottle ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು  ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.-1 ಎಂದು ಗುರುತಿಸಲಾಯಿತು.

2 ನೇಯದಾಗಿ  180 ML imperial blue whiskey ಯ ಒಟ್ಟು 48 Bottle ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು  ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.-2 ಎಂದು ಗುರುತಿಸಲಾಯಿತು.

3 ನೇಯದಾಗಿ  180 ML Officers choice whiskey ಯ ಒಟ್ಟು 36 tetra pocket ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು  ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.-3 ಎಂದು ಗುರುತಿಸಲಾಯಿತು.

4 ನೇಯದಾಗಿ  180 ML Bag piper whiskey ಯ ಒಟ್ಟು 48 tetra pocket ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು  ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ

ಮು.ಮಾ.-4 ಎಂದು ಗುರುತಿಸಲಾಯಿತು.

5 ನೇಯದಾಗಿ 180 ML MC whiskey ಯ ಒಟ್ಟು 10 bottle ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.-5 ಎಂದು ಗುರುತಿಸಲಾಯಿತು.

6 ನೇಯದಾಗಿ 180 ML old tavern whiskey ಯ ಒಟ್ಟು 35 tetra pocket ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.-6 ಎಂದು ಗುರುತಿಸಲಾಯಿತು.

7 ನೇಯದಾಗಿ 750 ML DSP Black whiskey ಯ ಒಟ್ಟು 02 bottle ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.-7 ಎಂದು ಗುರುತಿಸಲಾಯಿತು.

8 ನೇಯದಾಗಿ 180 ML Original choice whiskey ಯ ಒಟ್ಟು 23 tetra pocket ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.-8 ಎಂದು ಗುರುತಿಸಲಾಯಿತು.

9 ನೇಯದಾಗಿ 750 ML old tavern whiskey ಯ 01 bottle ಅನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.-9 ಎಂದು ಗುರುತಿಸಲಾಯಿತು.

10 ನೇಯದಾಗಿ 750 ML MC Rum ನ 01 bottle ಅನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.-10 ಎಂದು ಗುರುತಿಸಲಾಯಿತು.

11 ನೇಯದಾಗಿ 750 ML Officers choice whiskey ಯ 01 bottle ಅನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.-11 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಕಾಕಿ ಕವರನಲ್ಲಿ ಇರುವ 100/- ರೂ, ಮುಖಬೆಲೆಯ 3 ನೋಟುಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.-12 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ **DBP** ವಕೀಲರಿಂದಃ-</u>

ಚಾಸಾ 1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಅಫಜಲಪೂರದಿಂದ ಜೇವರ್ಗಿ ಗ್ರಾಮ ಸುಮಾರು 35 ಕಿ.ಮಿ. ದೂರದಲ್ಲಿದೆ ಎಂದರೆ ಸರಿಯಲ್ಲ. ನಾವು ಜೇವರ್ಗಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಹೋದಾಗ ಸಾರ್ವಜನಿಕರು ಇದ್ದರು. ಆರೋಪಿಯು ಮಧ್ಯ ಮಾರಾಟ ಮಾಡುತ್ತಿರುವುದನ್ನು ಫೊಟೋ ತೆಗೆದುಕೊಂಡಿರುವುದಿಲ್ಲ. ಜಪ್ತಿ ಪಡಿಸಿಕೊಂಡ ಮುದ್ದೆ ಮಾಲುಗಳ ಬ್ಯಾಚ್ ನಂಬರಗಳು ನನಗೆ ಗೊತ್ತಿಲ್ಲ. ಜಪ್ತಿ ಪಡಿಸಿಕೊಂಡ 100 ರೂ. ನೋಟಗಳ ನಂಬರಗಳನ್ನು ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳದ ಸುತ್ತಮುತ್ತ ಮನೆಗಳು ಇರುತ್ತವೆ. ಆರೋಪಿತನಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸಿರುವುದಿಲ್ಲ ಸರಿಯಲ್ಲ. ಚಾಸಾ 1 ರವರು ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರು ನೀಡಿದ ಸುಳ್ಳು ದೂರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಿನಾಂಕ 19.05.2020 ರಂದು ಆರೋಪಿತನ ಮೇಲೆ ದಾಳಿ ಮಾಡಿ ಆತನಿಂದ ಮುದ್ದೆ ಮಾಲುಗಳನ್ನು ಜಪ್ತಿ ಪಡಿಸಿಕೊಂಡು, ಸ್ಥಳದಲ್ಲಿ ಜಪ್ತಿ ಪಂಚನಾಮೆಯನ್ನು ಬರೆದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ